118

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ಸಿಆಸುಸ್ಥಾಸ/ಪಿಆರ್/20/2013-14

ಕೌನ್ಸಿಲ್ ಕಾರ್ಯಾಲಯ
ಕೆಂಪೇಗೌಡ ಪೌರಸಭಾಂಗಣ ಕಟ್ಟಡ
ಬೆಂಗಳೂರು, ದಿನಾಂಕ:19.09.2013

**ಸಭೆಯ ತಿಳುವಳಿಕೆ ಪತ್ರ**

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯು ದಿನಾಂಕ:23.09.2013 ರಂದು ಸೋಮವಾರ ಬೆಳಿಗ್ಗೆ 11.00 ಘಂಟೆಗೆ ಕೆಂಪೇಗೌಡ ಪೌರ ಸಭಾಂಗಣ ಕಟ್ಟಡದ ಎರಡನೇ ಮಹಡಿಯಲ್ಲಿರುವ ಸಮಿತಿಯ ಕಛೇರಿಯಲ್ಲಿ ಪರಿಚಯ ಸಭೆಯನ್ನು ಕರೆಯಲಾಗಿದೆ. ಈ ಸಭೆಗೆ ಈ ಕೆಳಕಂಡ ಅಧಿಕಾರಿಗಳು ತಮ್ಮ ಇಲಾಖೆಯ ಕಾರ್ಯವೈಖರಿ ಕುರಿತಂತೆ ಸಂಕ್ಷಿಪ್ತ ಟಿಪ್ಪಣಿ/ಮಾಹಿತಿಯೊಂದಿಗೆ ಭಾಗವಹಿಸಲು ಕೋರಿದೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಸದಸ್ಯರುಗಳು ಈ ಸಭೆಯಲ್ಲಿ ಉಪಸ್ಥಿತರಿರುವಂತೆ ಕೋರಿದೆ.

1. ಎಲ್ಲಾ ವಲಯ ಅಪರ/ಜಂಟಿ ಆಯುಕ್ತರುಗಳು
2. ಅಪರ ಆಯುಕ್ತರು (ಆಡಳಿತ)
3. ಜಂಟಿ ಆಯುಕ್ತರು (ಆಸ್ತಿಗಳು)
4. ಪ್ರಧಾನ ಅಭಿಯಂತರರು
5. ಉಪ ಆಯುಕ್ತರು (ಕಂದಾಯ)
6. ಉಪ ಆಯುಕ್ತರು (ತರಬೇತಿ)
7. ಉಪ ಆಯುಕ್ತರು (ಮಾರುಕಟ್ಟೆ)
8. ಉಪ ಆಯುಕ್ತರು (ಭೂಸ್ವಾಧೀನ)
9. ಅಪರ ನಿರ್ದೇಶಕರು (ನಗರ ಯೋಜನೆ)
10. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು
11. ಕಾನೂನು ಕೋಶ ಮುಖ್ಯಸ್ಥರು
12. ಮುಖ್ಯ ಲೆಕ್ಕಾಧಿಕಾರಿಗಳು
13. ವಿದ್ಯಾಧಿಕಾರಿಗಳು
14. ಸಾ... ಕ ಸಂಪರ್ಕಾಧಿಕಾರಿಗಳು

ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ,)

ಕೌನ್ಸಿಲ್ ಕಾರ್ಯದರ್ಶಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಮು.ತಿ.ನೋ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

### ದಿನಾಂಕ:23.09.2013ರ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಸಭೆಯ ನಡವಳಿಗಳು

| ಕ್ರ ಸಂ | ಹಾಜರಿದ್ದ ಸದಸ್ಯರು ಶ್ರೀಯುತರುಗಳಾದ | |
|---|---|---|
| 1. | ಲಕ್ಷ್ಮೀಕಾಂತ ರೆಡ್ಡಿ | – ಅಧ್ಯಕ್ಷರು |
| 2. | ಅಶ್ವಥನಾರಾಯಣಗೌಡ | – ಸದಸ್ಯರು |
| 3. | ಕೆ.ಮಹೇಶ್ ಬಾಬು | – ಸದಸ್ಯರು |
| 4. | ಎಂ.ಜಿ.ಜಯರತ್ನ | – ಸದಸ್ಯರು |
| 5. | ಲಲಿತ ಹೆಚ್.ಎಸ್. | – ಸದಸ್ಯರು |
| 6. | ಆನಂದ್ ವಿ | – ಸದಸ್ಯರು |
| 7. | ಎಂ. ಶ್ರೀನಿವಾಸ | – ಸದಸ್ಯರು |
| 8. | ಲಾವಣ್ಯ ಗಣೇಶ್ ರೆಡ್ಡಿ | – ಸದಸ್ಯರು |
| 9. | ವರಲಕ್ಷ್ಮಿ ಜೆ | – ಸದಸ್ಯರು |
| 10. | ಎನ್.ಜಯಪಾಲ | – ಸದಸ್ಯರು |
| 11. | ಎಂ.ಕೆ. ಗುಣಶೇಖರ್ | – ಸದಸ್ಯರು |

**ಹಾಜರಿದ್ದ ಅಧಿಕಾರಿಗಳು**

ಅಪರ ಆಯುಕ್ತರು (ಆಡಳಿತ)
ಅಪರ ಆಯುಕ್ತರು (ಪಶ್ಚಿಮ)
ಅಪರ ಆಯುಕ್ತರು (ಪೂರ್ವ)
ಜಂಟಿ ಆಯುಕ್ತರು (ಪೂರ್ವ)
ಜಂಟಿ ಆಯುಕ್ತರು (ರಾ.ರಾ.ನ)
ಜಂಟಿ ಆಯುಕ್ತರು (ಬೊಮ್ಮನಹಳ್ಳಿ)
ಜಂಟಿ ಆಯುಕ್ತರು (ದಾಸರಹಳ್ಳಿ)
ಜಂಟಿಆಯುಕ್ತರು (ಮಹಾದೇವಪುರ)
ಜಂಟಿ ಆಯುಕ್ತರು (ಯಲಹಂಕ)
ಕಾನೂನು ಕೋಶದ ಮುಖ್ಯಸ್ಥರು
ಪ್ರಧಾನ ಅಭಿಯಂತರರು
ಅಪರ ನಿರ್ದೇಶಕರು (ನಗರ ಯೋಜನ)
ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು
ಉಪ ಆಯುಕ್ತರು (ಮಾರುಕಟ್ಟೆ)
ಉಪ ಆಯುಕ್ತರು (ಕಂದಾಯ)
ಉಪ ಆಯುಕ್ತರು (ಮಹಾದೇವಪುರ)
ಸಹಾಯಕ ಆಯುಕ್ತರು (ಆಡಳಿತ)
ತಹಶೀಲ್ದಾರ್ (ಭೂಸ್ವಾಧೀನ ಮತ್ತು ಟಿ.ಡಿ.ಆರ್)
ಸಾರ್ವಜನಿಕ ಸಂಪರ್ಕಾಧಿಕಾರಿಗಳು
ವಿಶೇಷ ಕರ್ತವ್ಯಾಧಿಕಾರಿ

**ಗೈರು ಹಾಜರಾಗಿದ್ದ ಅಧಿಕಾರಿಗಳು**

ಜಂಟಿ ಆಯುಕ್ತರು (ದಕ್ಷಿಣ)
ಜಂಟಿ ಆಯುಕ್ತರು (ಆಸ್ತಿಗಳು)
ಉಪ ಆಯುಕ್ತರು (ತರಬೇತಿ)
ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು
ಮುಖ್ಯ ಲೆಕ್ಕಾಧಿಕಾರಿಗಳು
ವಿದ್ಯಾಧಿಕಾರಿಗಳು

~*~

ಅಧ್ಯಕ್ಷರು ಸಭೆಗೆ ಹಾಜರಿದ್ದ ಸದಸ್ಯರನ್ನು ಹಾಗೂ ಅಧಿಕಾರಿಗಳನ್ನು ಸ್ವಾಗತಿಸುತ್ತಾ ಉಪಸ್ಥಿತರಿದ್ದಂತಹ ಎಲ್ಲರನ್ನು ಪರಿಚಯ ಮಾಡಿಕೊಳ್ಳಲು ಸೂಚಿಸಿ, ಇಲಾಖಾವಾರು ಅಧಿಕಾರಿಗಳ ಕಾರ್ಯವೈಖರಿ ಕುರಿತಂತೆ ಸಮಿತಿಗೆ ವಿವರಿಸಲು ಕೋರಿದರು.

21/9/13

120

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಪರ ಆಯುಕ್ತರು(ಆಡಳಿತ)ರವರು ಹಾಜರಿದ್ದಂತಹ ಎಲ್ಲಾ ಅಧಿಕಾರಿಗಳು ತಮ್ಮ ವ್ಯಾಪ್ತಿಯ ಕಾರ್ಯ ವೈಖರಿ ಕುರಿತಂತೆ ಸಭೆಗೆ ಸಂಕ್ಷಿಪ್ತವಾಗಿ ವಿವರಣೆಯನ್ನು ನೀಡಿದರು. ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳು ಅವರ ಕಛೇರಿಗಳಲ್ಲಿ ಸಿಬ್ಬಂದಿಗಳ ಕೊರತೆ ಇದ್ದು ಇದರಿಂದಾಗಿ ದೈನಂದಿನ ಕಛೇರಿ ಕೆಲಸ ಕಾರ್ಯಗಳಿಗೆ ಅಡಚಣೆ ಉಂಟಾಗುತ್ತಿರುವುದಾಗಿ ತಿಳಿಸಿ ಖಾಲಿ ಇರುವ ಹುದ್ದೆಗಳನ್ನು ವಿಳಂಭ ಮಾಡದೇ ತುಂಬಿದಲ್ಲಿ ಪಾಲಿಕೆಯ ಕೆಲಸ ಕಾರ್ಯಗಳನ್ನು ಸೂಸೂತ್ರವಾಗಿ ನಿರ್ವಹಿಸಲು ಸಾಧ್ಯವಾಗುವುದೆಂದು ವಿವರಿಸಿದರು.

ಸಮಿತಿಯ ಸದಸ್ಯರಾದ ಶ್ರೀ ಎಂ.ಕೆ. ಗುಣಶೇಖರ್ ರವರು ಮಾತನಾಡುತ್ತ, ತಾವುಗಳು ಕೇವಲ ಖಾಲಿ ಇರುವ ಹುದ್ದೆಗಳ ಬಗ್ಗೆ ಮಾತ್ರ ಮಾಡುನಾಡುತ್ತಿದ್ದೀರಿ, ಆದರೆ ಹೆಚ್ಚುವರಿಯಾಗಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಬಗ್ಗೆ ಯಾರು ಪ್ರಸ್ತಾಪ ಮಾಡುತ್ತಿಲ್ಲ ಹಾಗೂ ಮಂಜೂರಾತಿ ಇಲ್ಲದ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರಿಗೆ ಯಾವ ಲೆಕ್ಕಶೀರ್ಷಿಕೆಯಡಿ ವೇತನ ಪಾವತಿಸಲಾಗುತ್ತಿದೆ ಎಂದು ಕೇಳಲಾಗಿ, ಜಂಟಿ ಆಯುಕ್ತರುಗಳು ಆಡಳಿತ ಶಾಖೆಯಿಂದ ಆದೇಶ ಜಾರಿ ಮಾಡಿರುವ ಹಿನ್ನೆಲೆಯಲ್ಲಿ ನಾವುಗಳು ಅವರ ಹಾಜರಾತಿ ಪಡೆದು ವೇತನ ಪಾವತಿಸುತ್ತಿರುವುದಾಗಿ ವಿವರಿಸಿ ಹೆಚ್ಚುವರಿಯಾಗಿ ಇರುವ ಹುದ್ದೆಗಳ ಬಗ್ಗೆ ವಿವರ ನೀಡುವಲ್ಲಿ ವಿಫಲರಾಗಿರುತ್ತಾರೆ.

ಅಪರ ಆಯುಕ್ತರು(ಆಡಳಿತ) ರವರು ಮಾತನಾಡುತ್ತಾ ಸರ್ಕಾರದ ಹಂತದಿಂದ ಆದೇಶ ಮಾಡಿಸಿಕೊಂಡು ಬರುತ್ತಿದ್ದು ಅದರಲ್ಲಿಯು ಅಧಿಕವಾಗಿ ನಗರ ಯೋಜನೆ ವಿಭಾಗಕ್ಕೆ ಹೆಚ್ಚುವರಿಯಾಗಿ ನಿಯೋಜಿಸಲ್ಪಡುತ್ತಿದ್ದು ಇದನ್ನು ನಿಯಂತ್ರಣಕ್ಕೆ ತರುವುದು ಅತ್ಯವಶ್ಯಕವೆಂದು ವಿವರಿಸಿರುತ್ತಾರೆ.

ಶ್ರೀ.ಮಹೇಶ್ ಬಾಬು, ಸದಸ್ಯರವರು ಮಾತನಾಡುತ್ತಾ ಪಾಲಿಕೆಯಲ್ಲಿ ಎರವಲು ಸೇವೆಯ ಮೇಲೆ ನಿಯೋಜನೆಗೆ ಬರುವ ಅಧಿಕಾರಿಗಳ ಮೇಲೆ ನಿಯಂತ್ರಣ ಇಡುವುದು ಸೂಕ್ತವೆಂದು ತಿಳಿಸಿರುತ್ತಾರೆ.

ಶ್ರೀಮತಿ ಜೆ. ವರಲಕ್ಷ್ಮಿ ರವರು ಸಹ ಪಾಲಿಕೆಯಲ್ಲಿ ನಿಗಧಿತ ಹುದ್ದೆಗಳಿಗಿಂತ ಹೆಚ್ಚುವರಿಯಾಗಿ ಅಭಿಯಂತರರು ನಿಯೋಜನೆಗೊಂಡಿದ್ದು ಅಗತ್ಯವಿಲ್ಲದಿರುವ ಅಭಿಯಂತರರುಗಳನ್ನು ಮಾತೃ ಇಲಾಖೆಗೆ ಹಿಂದಿರುಗಿಸಬೇಕೆಂದು ತಿಳಿಸಿದರು.

ಅಧ್ಯಕ್ಷರು ಪಾಲಿಕೆಗೆ ನಿಯೋಜನೆಗೊಳ್ಳುವ ಎಲ್ಲಾ ಅಭಿಯಂತರರುಗಳು ಹೆಚ್ಚಾಗಿ ನಗರ ಯೋಜನೆ ವಿಭಾಗದಲ್ಲಿಯೇ ಕಾರ್ಯನಿರ್ವಹಿಸಲು ಇಚ್ಚಿಸಿ ಒತ್ತಡ ತರುತ್ತಿರುವುದು ಕಂಡುಬಂದಿರುತ್ತದೆ. ಆದ್ದರಿಂದ ಅಗತ್ಯಕ್ಕಿಂತ ಹೆಚ್ಚಾಗಿ ನಗರ ಯೋಜನೆ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಭಿಯಂತರರುಗಳನ್ನು ಅಗತ್ಯವಿರುವ ಇತರೇ ವಿಭಾಗಗಳಿಗೆ ವರ್ಗಾಯಿಸುವ ಸಂಬಂಧ ಪ್ರಸ್ತಾವನೆಯನ್ನು ಸಮಿತಿಗೆ ಮಂಡಿಸಲು ತಿಳಿಸಿದರು.

ಅಪರ ಆಯುಕ್ತರು(ಆಡಳಿತ) ರವರು ಮಾತನಾಡುತ್ತ ಪಾಲಿಕೆಯಲ್ಲಿ ಸಿಬ್ಬಂದಿಗಳ ಶಿಸ್ತಿನ ಬಗ್ಗೆ ಹೆಚ್ಚಿನ ಗಮನಹರಿಸಲು ಕ್ರಮಕೈಗೊಳ್ಳಲಾಗುತ್ತಿದ್ದು, ಈ ನಿಟ್ಟಿನಲ್ಲಿ ಪ್ರಥಮ ಹಂತವಾಗಿ ಬಯೋಮೆಟ್ರಿಕ್ ಯಂತ್ರವನ್ನು ಎಲ್ಲಾ ವಲಯ ಕಚೇರಿಗಳಲ್ಲಿ ಕಡ್ಡಾಯವಾಗಿ ಜಾರಿಗೊಳಿಸಲು ಕ್ರಮಕೈಗೊಳ್ಳಲಾಗುತ್ತಿದೆ. ಹಾಲಿ ಖಾಲಿ



26/9/13

ಇರುವ ಹುದ್ದೆಗಳನ್ನು ಮುಂಬಡ್ತಿ ಮೂಲಕ ಎಲ್ಲಾ ವೃಂದಗಳಿಂದ ತುಂಬಲು ಕ್ರಮಕೈಗೊಳ್ಳಲಾಗುತ್ತಿದೆ. ಮೊದಲ ಹಂತವಾಗಿ ದಿನಾಂಕ:01/01/2013ಕ್ಕೆ ಇರುವಂತೆ ಎಲ್ಲಾ ವೃಂದದ ಸೇವಾ ಜೇಷ್ಠಾ ಪಟ್ಟಿಯನ್ನು ಅಂತಿಮಗೊಳಿಸಲಾಗಿದ್ದು, ಈ ಮೇರೆಗೆ ಖಾಲಿ ಇರುವ ಹುದ್ದೆಗಳನ್ನು ಮುಂಬಡ್ತಿ ಮೂಲಕ ತುಂಬಲಾಗುವುದು. ಅದೇ ರೀತಿ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಯನ್ನು ಸಹ ಕೌನ್ಸಿಲ್ ಸಭೆಯಲ್ಲಿನ ನಿರ್ಣಯದ ರೀತ್ಯಾ ಕೆಲವೊಂದು ಮಾರ್ಪಾಡುಗಳನ್ನು ಮಾಡಬೇಕಾಗಿದ್ದು ಈ ನಿಟ್ಟಿನಲ್ಲಿ ಅಂತಿಮಗೊಳ್ಳುತ್ತಿದ್ದು ಕರಡು ನಿಯಮವನ್ನು ಸರ್ಕಾರಕ್ಕೆ ಶೀಘ್ರವಾಗಿ ಕಳುಹಿಸಲು ಕ್ರಮ ಜರುಗಿಸಲಾಗುವುದೆಂದು ತಿಳಿಸಿದರು ಹಾಗೂ ಉಚ್ಚ ನ್ಯಾಯಾಲಯದ ಆದೇಶದ ಅನುಸಾರ ಹಾಲಿ 4000 ಪೌರ ಕಾರ್ಮಿಕರ ಹುದ್ದೆಗಳನ್ನು ತುಂಬಲು ಸಹ ಕ್ರಮಕೈಗೊಳ್ಳಲಾಗುತ್ತಿದ್ದು, ಈ ಸಂಬಂಧ ನೇಮಕಾತಿ ಸಮಿತಿ ರಚನೆ ಕುರಿತಂತೆ ಸರ್ಕಾರದ ಹಂತದಲ್ಲಿ ವ್ಯವಹರಣೆ ನಡೆಸುತ್ತಿದ್ದು ಇದು ಪ್ರಗತಿ ಹಂತದಲ್ಲಿದೆ ಎಂದು ತಿಳಿಸಿದರು.

ಮುಂದುವರೆದು, ಪಾಲಿಕೆಯಲ್ಲಿ ಎಲ್ಲಾ ವರ್ಗದ ಸಿಬ್ಬಂದಿಗಳಿಗೆ ಆಡಳಿತಾತ್ಮಕ ಹಾಗೂ ತಾಂತ್ರಿಕ ವಿಷಯಗಳಿಗೆ ಸಂಬಂಧಿಸಿದಂತೆ ತರಬೇತಿ ಕಾರ್ಯವನ್ನು ಸಹ ಹಮ್ಮಿಕೊಳ್ಳಲು ಕ್ರಮ ಜರುಗಿಸಲಾಗುತ್ತಿದೆ ಎಂದು ಸಹ ತಿಳಿಸಿದರು.

ಪ್ರಧಾನ ಅಭಿಯಂತರರವರು ಮಾತನಾಡುತ್ತಾ, ಪಾಲಿಕೆಯ ಇಂಜಿನಿಯರಿಂಗ್ ಇಲಾಖೆಗೆ ಮುಖಸ್ಥರಾಗಿದ್ದು ತಮಗೆ ಯಾವುದೇ ವಿಧವಾದ ಕಾರ್ಯಭಾರವನ್ನು ನೀಡದೇ ಇದ್ದು ನ್ನಾನು ವಿಶೇಷ ಆಯುಕ್ತರ ಅಧೀನದಲ್ಲಿ ಕಾರ್ಯನಿರ್ವಹಿಸಲು ಮಾತ್ರ ಸೂಚಿಸಿದ್ದು, ಇದು ನನ್ನ ಆತ್ಮಗೌರವಕ್ಕೆ ಚ್ಯುತಿಯನ್ನುಂಟು ಮಾಡಿದೆ ಎಂದು ಹೇಳಲಾಗಿ, ಅಪರ ಆಯುಕ್ತರು(ಆಡಳಿತ) ರವರು ಮಾನ್ಯ ಆಯುಕ್ತರ ಪ್ರತ್ಯಾಯೋಜನೆ ರೀತ್ಯಾ ಕ್ರಮ ಜರುಗಿಸಲಾಗಿದೆ. ಅವರಿಗೆ ಎಲ್ಲಾ ವಿಧವಾದ ಕೆಲಸಕಾರ್ಯಗಳನ್ನು ವಹಿಸಲಾಗಿದೆ. ಸರ್ಕಾರದ ಹಂತದಲ್ಲಿ ಇರುವಂತೆ ಇಲ್ಲಿಯು ಸಹ ಕಾರ್ಯನಿರ್ವಹಿಸಲು ಸೂಚಿಸಿದೆ ಎಂದು ವಿವರಿಸಿದರು.

ಈ ಸಂದರ್ಭದಲ್ಲಿ ಪ್ರಧಾನ ಅಭಿಯಂತರರವರು ಮಾತನಾಡುತ್ತ ದಿನಾಂಕ:21/07/2013ರ ಆಯುಕ್ತರ ಅಧಿಕಾರ ಪ್ರತ್ಯಾಯೋಜನೆಯ ಪ್ರಕಾರ ನನಗೆ ಯಾವುದೇ ಅಧಿಕಾರವಿರುವುದಿಲ್ಲ, ತಾಂತ್ರಿಕ ಇಲಾಖೆಯ ಮುಖ್ಯಸ್ಥನಾದ ನನ್ನನ್ನು ಮೂಲೆಗುಂಪು ಮಾಡಿ ತಾಂತ್ರಿಕನಲ್ಲದ ಹುದ್ದೆಯಲ್ಲಿ ಕಾರ್ಯನಿರ್ವಹಿಸಲು ಆದೇಶಿಸಲಾಗಿದೆ. ಈ ಬಗ್ಗೆ ಎಲ್ಲರ ಬಳಿಯು ಮನವಿ ಮಾಡಿಕೊಂಡಿದ್ದರೂ ಸಹ ಪರಿಗಣಿಸಿರುವುದಿಲ್ಲ ಎಂದು ತಿಳಿಸಿದರು.

ಶ್ರೀ ಗುಣಶೇಖರ್ ಮಾತನಾಡುತ್ತ ಪ್ರಧಾನ ಅಭಿಯಂತರರು ಕಾಮಗಾರಿ ಇಲಾಖೆಗೆ ಪ್ರಧಾನರು ಅವರನ್ನು ಮೂಲೆಗುಂಪು ಮಾಡುವುದು ಸರಿಯಲ್ಲ ವೆಂದು ತಿಳಿಸಿರುತ್ತಾರೆ.

ಶ್ರೀ ಅಶ್ವಥನಾರಾಯಣ ಗೌಡ, ಸದಸ್ಯರವರು ಮಾತನಾಡುತ್ತ ಹಾಲಿ ಪರಿಸರ ಅಭಿಯಂತರರ ಹುದ್ದೆಗೆ ನೇಮಕ ಹೊಂದಿರುವ ಅಭಿಯಂತರರು ಸಿವಿಲ್ ಇಂಜಿನಿಯರ್ ಪದವಿಧರರಾಗಿದ್ದು ಇವರುಗಳು ಪಾಲಿಕೆ ಸೇವೆಗೆ ಬಂದ ನಂತರ ಸ್ವಚ್ಛತೆ ಕಾರ್ಯ ನಿರ್ವಹಿಸುವುದನ್ನು ಬಿಟ್ಟು ವಾರ್ಡ್‌ಗಳಲ್ಲಿ ಕಾರ್ಯನಿರ್ವಹಿಸಲು ಪೈಪೋಟಿ ನೀಡುತ್ತಿರುವುದು ಕಾಣಬಹುದಾಗಿದೆ ಎಂದು ತಿಳಿಸಲಾಗಿ, ಈ ಬಗ್ಗೆ ಶ್ರೀ

ಗುಣಶೇಖರ್, ಸದಸ್ಯರವರು ಮಾತನಾಡುತ್ತ ಪರಿಸರ ಅಭಿಯಂತರರ ಹುದ್ದೆಗೆ ನೇಮಕಾತಿಗೊಂಡ ಸಹಾಯಕ ಅಭಿಯಂತರರುಗಳು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರುಗಳ ಹುದ್ದೆಗೆ ಮುಂಬಡ್ತಿ ಹೊಂದಿದ ನಂತರ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು ಸದರಿಯವರುಗಳನ್ನು Land Fill ಗಳಲ್ಲಿ ಕಾರ್ಯನಿರ್ವಹಿಸಲು ನಿಯೋಜಿಸಬಹುದೆಂದು ಅಭಿಯಪ್ರಾಯಿಸಿರುತ್ತಾರೆ. ಈ ಸಂದರ್ಭದಲ್ಲಿ ಅಪರ ಆಯುಕ್ತರು (ಆಡಳಿತ) ರವರು ಮಾತನಾಡುತ್ತ ಪರಿಸರ ಅಭಿಯಂತರರ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಕಲೆ ನೇಮಿಸಿಕೊಳ್ಳುವ ಪ್ರಸ್ತಾವನೆಯನ್ನು ಪಾಲಿಕೆಯ ಸಭೆಯು ರದ್ದು ಪಡಿಸಿರುತ್ತದೆ ಎಂದು ಸಭೆಗೆ ವಿವರಿಸಿದರು.

ಶ್ರೀ ಮಹೇಶ್ ಬಾಬು, ಸದಸ್ಯರು ಮಾತನಾಡುತ್ತ ಪಾಲಿಕೆ ವಿಲೀನಗೊಂಡ ನಗರ ಸಭೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ 193 ಪೌರ ಕಾರ್ಮಿಕರನ್ನು ಕ್ರಮಬದ್ದಗೊಳಿಸುವ ಬಗ್ಗೆ ಯಾವ ಕ್ರಮಕೈಗೊಳ್ಳಲಾಗಿದೆ ಎಂಬ ಬಗ್ಗೆ ಕೇಳಲಾಗಿದ್ದು, ಅಪರ ಆಯುಕ್ತರು (ಆಡಳಿತ) ರವರು ಮಾತನಾಡುತ್ತ ಈ ಕುರಿತಂತೆ ಪ್ರಸ್ತಾವನೆಯನ್ನು ಸಮಿತಿಗೆ ಮಂಡಿಸಿದೆ. ಈ ಪ್ರಸ್ತಾವನೆಯಲ್ಲಿ ಷರತ್ತುಗಳನ್ನು ವಿಧಿಸಿದೆ ಈ ನೌಕರರು Notified Area ಗಳಿಂದ ಬಂದಿರುತ್ತಾರೆ. ಈ ಮುಂಚೆ ಇವರ ನೇಮಕ ಯಾವ ವಿಧವಾಗಿ ಆಗಿದೆ ಎಂಬ ಬಗ್ಗೆ ದಾಖಲೆಗಳು ಇರುವುದಿಲ್ಲ ಆದರೆ ಮಾನವೀಯತೆ ದೃಷ್ಟಿಯಿಂದ ಪರಿಗಣಿಸಬೇಕಾಗುತ್ತದೆ ಎಂದು ತಿಳಿಸಿದರು.

ಶ್ರೀ ಗುಣಶೇಖರ್, ಸದಸ್ಯರು ಮಾತನಾಡುತ್ತ ಸರ್ಕಾರದ ಬೇರೆ ಇಲಾಖೆಗಳಿಂದ ಬರುವ ನೌಕರರನ್ನು ಪಾಲಿಕೆಯಲ್ಲಿ ವಿಲೀನಗೊಳಿಸಿಕೊಳ್ಳುತ್ತಿದ್ದು ಇದು ನಿಯಮಬಾಹಿರ ಕ್ರಮವಾಗಿದ್ದು ಇದನ್ನು ಸಂಪೂರ್ಣವಾಗಿ ತಡೆಗಟ್ಟತಕ್ಕದ್ದು ಎಂದು ತಿಳಿಸಿರುತ್ತಾರೆ. ಅಪರ ಆಯುಕ್ತರು (ಆಡಳಿತ) ಮಾತಾನಾಡುತ್ತ ಇನ್ನು ಮುಂದೆ ಇಂತಹ ಪ್ರಕ್ರಿಯೆಗಳಿಗೆ ಕಡಿವಾಣ ಹಾಕುವುದಾಗಿ ತಿಳಿಸಿರುತ್ತಾರೆ.

ಶ್ರೀ.ಅಶ್ವಥ ನಾರಾಯಣಗೌಡ, ಸದಸ್ಯರು ಮಾತನಾಡುತ್ತ ಇತ್ತೀಚೆಗೆ ಕಂದಾಯ ಇಲಾಖೆಯಲ್ಲಿ ಸಾಮೂಹಿಕ ವರ್ಗಾಣೆ ಮಾಡಿದ್ದು ಸದ್ಯದಲ್ಲಿಯೇ ಲೋಕಸಭೆ ಚುನಾವಣೆ ಬರಲಿದ್ದು ಹಾಲಿ ಹೊಸದಾಗಿ ಬಂದಿರುವ ನೌಕರರಿಗೆ ಚುನಾವಣೆ ಕಾರ್ಯನಿರ್ವಹಿಸಲು ಅವರ ವ್ಯಾಪ್ತಿಗೆ ಬರುವ ಪ್ರದೇಶವನ್ನು ಗುರುತಿಸಲು ಸಾಧ್ಯವಾಗದ ಕಾರಣ ಈ ಹಿಂದೆ ಇದ್ದ ನೌಕರರನ್ನು ಮರು ನೇಮಿಸಲು ಕೋರಿದ್ದು ಯಾರೋ ಒಬ್ಬರು ಮಾಡಿದ ತಪ್ಪಿಗೆ ಪೂರ್ಣವಾಗಿ ಕಂದಾಯ ಇಲಾಖೆಯ ನೌಕರರುಗಳನ್ನು ವರ್ಗಾವಣೆ ಮಾಡಿರುವ ಕ್ರಮ ಸರಿ ಇಲ್ಲವೆಂದು ತಿಳಿಸಿರುತ್ತಾರೆ.

ಅಪರ ಆಯುಕ್ತರು (ಆಡಳಿತ) ಮಾತನಾಡುತ್ತ ಈ ಹಿಂದೆ ನಗರ ಸಭೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ನೌಕರರು ಅವರು ಪಡೆಯುತ್ತಿದ್ದ ವೇತನದ ಅನುಸಾರ ಅವರಿಗೆ ಕಾರ್ಯನಿರ್ವಹಿಸಲು ನಿಯೋಜಿಸಿದೆ. ಈ ವರ್ಗಾವಣೆಯನ್ನು ಉಪ ಆಯುಕ್ತರು (ಕಂದಾಯ) ರವರು ಕೂಲಂಕುಷವಾಗಿ ಪರಿಶೀಲಿಸಿ ಪ್ರಸ್ತಾವನೆಯನ್ನು ನೀಡಿದ್ದು ಈ ಮೇರೆಗೆ ವರ್ಗಾವಣೆ ಮಾಡಿರುವುದಾಗಿ ತಿಳಿಸಿರುತ್ತಾರೆ.

ಶ್ರೀ.ಮಹೇಶ್ ಬಾಬು, ಸದಸ್ಯರು ಮಾತನಾಡುತ್ತ ಎಲ್ಲಾ ಇಲಾಖೆಗಳಲ್ಲಿಯು ವಿನಾಃಕಾರಣ ಕಡತಗಳನ್ನು ವಿಲೇ ಇಡುವುದೇ ಅಲ್ಲದೆ ಒಂದೇ ಬಾರಿ ಹಿಂಬರಹ ನೀಡದೇ ಪದೇ ಪದೇ ನೀಡುವ



26/9/13

ವಾಡಿಕೆಯನ್ನು ಮೈಗೂಡಿಸಿಕೊಂಡಿದ್ದು ಕೆಳಗಿನ ಅಂತಹ ಸಿಬ್ಬಂದಿಗಳಿಗೆ ಎಚ್ಚರಿಕೆ ನೀಡತಕ್ಕದ್ದು ಹಾಗೂ ಪದೇ ಪದೇ ಮುಖ್ಯ ಕಛೇರಿಯಲ್ಲಿ ಸಭೆಗಳನ್ನು ಕರೆಯುವ ವಾಡಿಕೆಯನ್ನು ತಪ್ಪಿಸತಕ್ಕದ್ದು ಎಂದು ತಿಳಿಸಿರುತ್ತಾರೆ ಹಾಗೂ ಮಧ್ಯಾಹ್ನದ ಅವಧಿಯಲ್ಲಿ ಯಾವುದೇ ಸಭೆಗಳನ್ನು ನಡೆಸತಕ್ಕದಲ್ಲವೆಂದು ಸೂಚಿಸಿರುತ್ತಾರೆ. ಈ ಮಧ್ಯ ಅಧ್ಯಕ್ಷರು ಕಡತ ವಿಲೇವಾರಿ ಮಾಡಲು ನಿಗಧಿಪಡಿಸಿರುವ ಕಾಲಾವಧಿ ಬಗ್ಗೆ ಅಪರ ಆಯುಕ್ತರು (ಆಡಳಿತ) ರವರನ್ನು ವಿವರಣೆ ಕೇಳಿದರು.

ಅಪರ ಆಯುಕ್ತರು (ಆಡಳಿತ) ರವರು ಕಡತ ಸ್ವೀಕರಿಸಿದ 3 ದಿವಸಗೊಳಗಾಗಿ ವಿಲೇವಾರಿ ಮಾಡಬೇಕಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಇದಕ್ಕೆ ಪ್ರತಿಕ್ರಯಿಸಿದ ಅಧ್ಯಕ್ಷರು ತಪಾಸಣೆ ಸಂದರ್ಭದಲ್ಲಿ ನಿಗಧಿತ ಅವಧಿಗಿಂತ ಕಡತ ವಿಲೇ ಇಟ್ಟಿರುವುದು ಕಂಡಬಂದಲ್ಲಿ ಅಂತಹ ಅವರ ವಿರುದ್ಧ ಶಿಸ್ತು ಕ್ರಮಕೈಗೊಳ್ಳಲಾಗುವುದೆಂದು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ ಸೂಚಿಸಿದರು ಹಾಗೂ ಈ ಬಗ್ಗೆ ಸುತ್ತೋಲೆ ಹೊರಡಿಸಲು ಸಹ ಅಪರ ಆಯುಕ್ತರು (ಆಡಳಿತ) ರವರಿಗೆ ತಿಳಿಸಿದರು.

ಶ್ರೀ.ಗುಣಶೇಖರ್ ಮಾತನಾಡುತ್ತ ಇಲಾಖಾ ಮುಖಸ್ಥರ ಕಛೇರಿಯಲ್ಲಿ ಕೆಳಗಿನ ಹಂತದ ನೌಕರರುಗಳು ಕಡತಗಳನ್ನು ವಿನಾಃಕಾರಣ ವಿಲೇ ಇಡುವುದರಿಂದ ಇಲಾಖಾ ಮುಖಸ್ಥರಿಗೆ ಕೆಟ್ಟ ಹೆಸರು ಬರುವುದರಿಂದ ಬಹಳ ದಿನಗಳಿಂದ ಇಂತಹ ಸ್ಥಳದಲ್ಲಿರುವ ಸಿಬ್ಬಂದಿಗಳನ್ನು ಕೂಡಲೇ ವರ್ಗಾವಣೆ ಮಾಡುವುದು ಸೂಕ್ತವೆಂದು ತಿಳಿಸಿರುತ್ತಾರೆ ಹಾಗೂ ಸಮಿತಿಯ ಅಧಿಕಾರ ವ್ಯಾಪ್ತಿಯ ಬಗ್ಗೆ ವಿವರಣೆ ಕೇಳಿದ ಇವರು ಈ ವಿಷಯಕ್ಕೆ ಸಂಬಂಧಿಸಿದಂತೆ ಲಭ್ಯವಿದ್ದ ಆಯುಕ್ತರು ಹೊರಡಿಸಿರುವ ದಿನಾಂಕ: 07-04-2011 ರ ಕಛೇರಿ ಆದೇಶವನ್ನು ಪರಿಶೀಲಿಸಿ ವರ್ಗಾವಣೆಯು ಸೇರಿದಂತೆ ಆಡಳಿತಾತ್ಮಕ ವಿಷಯಕ್ಕೆ ಸಂಬಂಧಿಸಿದ ಎಲ್ಲಾ ಕಡತಗಳನ್ನು ಸಮಿತಿಗೆ ಮಂಡಿಸಬೇಕಾಗಿರುತ್ತದೆ ಎಂದು ತಿಳಿಸಿದರು.

ಶ್ರೀ. ಶ್ರೀನಿವಾಸ, ಸದಸ್ಯರು ಮಾತನಾಡುತ್ತ ಆಡಳಿತ ವಿಭಾಗದ ಸಿಬ್ಬಂದಿಗಳು ಸಮರ್ಪಕವಾಗಿ ಕಾರ್ಯನಿರ್ವಹಿಸದೆ ಇರುವುದರಿಂದ ಕೂಡಲೇ ಈ ಬಗ್ಗೆ ಕ್ರಮ ಜರುಗಿಸಲು ಸೂಚಿಸಿದರು.

ಶ್ರೀ ಮಹೇಶ್ ಬಾಬು, ಸದಸ್ಯರು ಕಾನೂನು ಕೋಶದ ಮುಖ್ಯಸ್ಥರಿಗೆ ಹಾಲಿ ಪಾಲಿಕೆಯ ವಿರುದ್ಧ ವಿವಿಧ ಕೋರ್ಟ್ ಗಳಲ್ಲಿ ಬಾಕಿ ಇರುವ ಕೇಸ್‌ಗಳ ಬಗ್ಗೆ ವರದಿ ನೀಡಲು ಕೋರಿದ್ದು ಅವರು ನೀಡಿದ ಅಂಕಿ ಸಂಖ್ಯೆಗಳನ್ನು ನೋಡಿ ಕೂಡಲೇ ಹೆಚ್ಚಿನ ಶ್ರದ್ಧೆ ವಹಿಸಿ ತಮ್ಮ ವಿಭಾಗದ ಸಿಬ್ಬಂದಿಗಳು ಕಾರ್ಯ ಪ್ರವೃತ್ತರಾಗಲು ತಿಳಿಸಿದರು ಹಾಗೂ ಒಂದೇ ರಸ್ತೆಯಲ್ಲಿ ಎಷ್ಟು ಸಂಖ್ಯೆಗಳ Sky walk ಅಳವಡಿಸಲು ನಿಯಮಗಳಲ್ಲಿ ಅವಕಾಶವಿದೆಯೆಂದು ಕೇಳಲಾಗಿ ಉಪಸ್ಥಿತರಿದ್ದ ಅಧಿಕಾರಿಗಳು ಅಪ್ರಬುದ್ಧ ಹೇಳಿಕೆಯನ್ನು ನೀಡಿದ್ದು ಈ ಬಗ್ಗೆ ಸದಸ್ಯರು ತಮ್ಮ ಅಸಹನೆಯನ್ನು ವ್ಯಕ್ತಪಡಿಸಿರುತ್ತಾರೆ.

ಅಧ್ಯಕ್ಷರು ಮಾತನಾಡುತ್ತ, ಪಾಲಿಕೆಯ ಆಡಳಿತ ವಿಭಾಗದಲ್ಲಿನ ಸಿಬ್ಬಂದಿ ವರ್ಗದವರು ಆಶಿಸ್ತಿನಿಂದ ವರ್ತಿಸುತ್ತಿದ್ದು ಹಾಗೂ ಸಮಯಪ್ರಜ್ಞೆ ಕಾರ್ಯತತ್ಪರತೆ ಇಲ್ಲದೆ ಇರುವುದರಿಂದ ಸಾರ್ವಜನಿಕ ವಲಯ ಹಾಗೂ ಮಾಧ್ಯಮಗಳಲ್ಲಿ ಪಾಲಿಕೆಯ ಬಗ್ಗೆ ಕಳಂಕ ತರುವಂತಹ ಅಭಿಪ್ರಾಯಗಳು ಮೂಡುತ್ತಿದ್ದು, ಈ ಹಿನ್ನೆಲೆಯಲ್ಲಿ ಎಲ್ಲಾ ಅಧಿಕಾರಿ/ಸಿಬ್ಬಂದಿ ವರ್ಗದವರು ಪಾಲಿಕೆಯನ್ನು ತಮ್ಮ ಸ್ವಂತ ಸಂಸ್ಥೆ ಎಂಬ ಮನೋಭಾವದಿಂದ ಕಾರ್ಯನಿರ್ವಹಿಸಿದಲ್ಲಿ ಸಾರ್ವಜನಿಕ ವಲಯದಲ್ಲಿ ಪಾಲಿಕೆಯ ಕುರಿತಂತೆ ಉಂಟಾಗಿರುವ ಎಲ್ಲಾ ಕಳಂಕಗಳನ್ನು ನಿವಾರಿಸಲು ಸಾಧ್ಯವೆಂಬ ಅಂಶವನ್ನು ಮನದಟ್ಟು ಮಾಡಿಕೊಳ್ಳಲು ತಿಳಿಸುತ್ತಾ, ಪ್ರತಿಯೊಬ್ಬ ಸಿಬ್ಬಂದಿವರ್ಗದವರಾಗಲಿ, ಅಧಿಕಾರಿ ವರ್ಗದವರಾಗಲಿ ಶಿಸ್ತಿನಿಂದ ತಮ್ಮಗಳಿಗೆ ವಹಿಸಿರುವ ಕೆಲಸಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸತಕ್ಕದೆಂದು ತಿಳಿಸಿ, ಸಮಿತಿಯು ಪಾಲಿಕೆಯ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಎಲ್ಲಾ ವಲಯ. ಹಾಗೂ ಮುಖ್ಯ ಕಛೇರಿಯ ಎಲ್ಲಾ ಇಲಾಖೆಗೂ ಪರಿಶೀಲನೆ ಕೈಗೊಳ್ಳುವುದಾಗಿ ತಿಳಿಸಿ, ಆ ಸಂದರ್ಭದಲ್ಲಿ ಲೋಪದೋಷಗಳು ಕಂಡುಬಂದಲ್ಲಿ ಶಿಸ್ತಿನ ಕ್ರಮವನ್ನು ಜರುಗಿಸಲಾಗುವುದೆಂದು ಎಚ್ಚರಿಸುತ್ತಾ, ಈ ಸಭೆಗೆ ಗೈರು ಹಾಜರಿಯಾಗಿರುವ ಅಧಿಕಾರಿಗಳಿಂದ ವಿವರಣೆ ಪಡೆಯಲು ತಿಳಿಸಿ ಪಾಲಿಕೆಯ ಆಡಳಿತದಲ್ಲಿ ಸುಧಾರಣೆಯನ್ನು ತರುವ ನಿಟ್ಟಿನಲ್ಲಿ ಸಮಿತಿಯ ಎಲ್ಲಾ ಸದಸ್ಯರುಗಳು ಪಕ್ಷಭೇದ ಮರೆತು ಸಹಕಾರಿಸಲು ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರುಗಳು ಹಾಗೂ ಅಧಿಕಾರಿಗಳಿಗೆ ವಂದನೆ ಅರ್ಪಿಸಿ ಸಭೆಯನ್ನು ಮುಕ್ತಾಯ ಗೊಳಿಸಿದರು.

Sd/- 26/9/13
ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು:

1. ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ
2. ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಅಪ್ತ ಸಹಾಯಕರವರಿಗೆ ಕಳುಹಿಸಿದೆ
3. ಸಮಿತಿಯ ಎಲ್ಲಾ ಸದಸ್ಯರಿಗೆ ಕಳುಹಿಸಿದೆ.
4. ಕೌನ್ಸಿಲ್ ಕಾರ್ಯದರ್ಶಿಗಳು ರವರಿಗೆ ಕಳುಹಿಸುತ್ತಾ ಎಲ್ಲಾ ಸಮಿತಿಯ ಅಧ್ಯಕ್ಷರಿಗೆ ಕಳುಹಿಸಲು ಸೂಚಿಸಿದೆ.
5. ಮಾನ್ಯ ಆಯುಕ್ತರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ,
6. ಅಪರ ಆಯುಕ್ತರು(ಆಡಳಿತ)/ ಎಲ್ಲಾ ವಲಯದ ಅಪರ/ಜಂಟಿ ಆಯುಕ್ತರುಗಳಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
7. ಕಛೇರಿ ಪ್ರತಿ.